ನೆನಪಿನಲ್ಲಿರಲಿ. ಬಳಿಕ ಆ ವಸ್ತು ಬೇಕಾದರೆ ಪ್ರಾಣಿ ಪಕ್ಷಿಯೇ ಆಗಿರಲಿ ಇಲ್ಲವೇ ಜೀವಂತ ಮನುಷ್ಯ. ಇದಕ್ಕೆ ಅತೀ ದೊಡ್ಡ ಪರಂಪರೆಯಿದೆ. ದೊಡ್ಡ ಇತಿಹಾಸವಿದೆ. ಪುರಾಣದಲ್ಲಿ ಒಬ್ಬ ರಾಜನು ಬಾಗಿಲಲ್ಲಿ ಬಂದ ಒಬ್ಬ ಋಷಿಯ ಇಚ್ಛೆಯು ಈಡೇರಿಸುವುದಾಗಲಿಲ್ಲವೆಂದು, ತನ್ನ ಸ್ವಂತ ಮಗಳನ್ನೇ ದಾನ ಮಾಡಿದನಂತೆ. ಆ ಋಷಿಯು ಎಂಟುನೂರು ಶ್ಯಾಮಕರ್ಣದ ಕುದುರೆಗಳಿಗಾಗಿ ಆ ಹುಡುಗಿಯನ್ನ ನಾಲ್ವರಿಗೆ ಮಾರಿದ. ಇದು ಐದು ಸಾವಿರ ವರ್ಷಗಳ ಹಿಂದಿನ ಕಥೆ. ಆ ರಾಜನ ಹೆಸರು ಯಯಾತಿ ಮತ್ತು ಋಷಿ, ವಿಶ್ವಾಮಿತ್ರನ ಶಿಷ್ಯನಾದ ಸಾಲ್ವ. ನಾವು ಅವರನ್ನು ವಂದಿಸುತ್ತೇವೆ. ಶ್ರೇಷ್ಠ ಜನರು ಅವರು. ಅದರ ಅನಂತರ ಆ ವಸ್ತುಗಳಿಗೆ ನಾನು ಕೈ ಹಚ್ಚಲಿಲ್ಲ. ದೂರದಿಂದ ಬರೇ ನೋಡುತ್ತ ಕೂತಿರುತ್ತಿದ್ದೆ. ಹಾಗೆ ನನ್ನ ಅಪ್ಪ, ಯಾರನ್ನು ನಾನು ಬಾಬೂಜಿ ಎನ್ನುತ್ತೇನೋ ಮತ್ತು ಅವನು ಎದುರಿಗೆ ಬಂದರೆ ಇಂದಿಗೂ ತಲೆ ತಗ್ಗಿಸುತ್ತೇನೆ. ಅತ್ಯಂತ ಶಿಸ್ತಿನ ಮನುಷ್ಯ. ದಂಧೆಯ ಪ್ರಾಮಾಣಿಕತೆಯೇ, ಅವನ ಗೀತೆ, ಕುರಾನ ಅಥವಾ ಬೈಬಲ್. ಪ್ರಸಂಗ ಬಂದರೆ ಅಪ್ಪನನ್ನು ಅಪ್ಪನೆಂದು ಕರೆಯಲಾರ. ಮಕ್ಕಳಿಗೆ ಗುರುತು ತೋರಿಸಲಾರ. ಆದರೆ, ವ್ಯಾಪಾರಕ್ಕಾಗಿ ಜೀವ ಒತ್ತೆಯಿಡುವ ಪೈಕಿ. ಬಿಜಿನೆಸ್ ಬೆಳೆಸಬೇಕಾದರೆ ಇಂಥ ಎದೆಗಾರಿಕೆ, ಇಂಥ ಸಿದ್ಧತೆ ಬೇಕು. ನನ್ನ ಹತ್ತಿರ ಈ ಎದೆಗಾರಿಕೆಯಿಲ್ಲ. ಮೈ ಕಬೂಲ್ ಕರತಾ ಹುಂ. ನಾನು ವ್ಯಾಪಾರವನ್ನು ಬೆಳೆಸಲಿಲ್ಲ. ಉಳಿಸಿಕೊಂಡು ಬಂದೆ. ಪ್ರಾಮಾಣಿಕವಾಗಿ ಉಳಿಸಿದೆ. ಒಂದು ಮಾನ ಮರ್ಯಾದೆ ಬರುವಂತೆ ಮಾಡಿದೆ. ಅಪ್ರಾಮಾಣಿಕತೆಯನ್ನು ಸಹ ಪ್ರಾಮಾಣಿಕವಾಗೇ ಮಾಡಬೇಕಾಗುತ್ತದೆ. ಆ ಗುಣ ಮಾತ್ರ ನನ್ನ ಹತ್ತಿರ ಮೊದಲಿನಿಂದಲೂ ಇತ್ತು. ಶುರುವಾತಿಗೆ ಹಲವಾರು ಸಮಸ್ಯೆಗಳು ಎದುರಾಗುತ್ತಿದ್ದವು. ನಾನು ಬಾಬೂಜಿಗೆ ಕೇಳುತ್ತಿದ್ದೆ. ಸತ್ಯವೆಂದರೇನು? ಪಾಪವೆಂದರೇನು? ಆದ್ಮಿ ಕಾ ಕಾನ್ಶಸ್ ಏ ಕ್ಯಾ ಚೀಜ್ ಹೋತಿ ಹೈ? ಬಾಬೂಜಿ ಸರ್ರನೆ ಮೈಮೇಲೆ ಏರಿ ಬರುತ್ತಿದ್ದ. 'ಸಾಲೇ ಬಕ್‌ವಾಸ್ ಬಂದ್‌ಕರ್ ಔರ್ ದಂಧೆಪೆ ಬೈಠ್. ಆ ಮೂಲೆಯಲ್ಲಿರುವ ಪುಸ್ತಕ ಓದಿ ನನ್ನನ್ನು ಪೀಡಿಸಬೇಡ. ಅದು ಒಂದಲ್ಲ ಒಂದು ದಿನ ಹರಿದು ಹೋಗುತ್ತದೆ. ಆದರೆ, ನಮ್ಮ ವ್ಯಾಪಾರ ಹಾಗೇ ಉಳಿಯುತ್ತದೆ. ಶಾಶ್ವತ. ಸನಾತನವನ್ನು ಗುರುತಿಸಲು ಕಲಿ ಬೇವ್‌ಕೂಫ್. ನಾನು ಕನ್‌ಫ್ಯೂಜ್ ಆಗುತ್ತಿದ್ದೆ. ನಾನು ಮೊದಲಿನಿಂದಲೂ ಹೀಗೆಯೇ. ಸಾಲಾ ಕನ್‌ಫ್ಯೂಜ್ಡ್. ಬಾಬೂಜಿ ಕಿವಿ ಹಿಂಡುತ್ತಿದ್ದ. ಕೆನ್ನೆಗೆ ಹೊಡೆಯುತ್ತಿದ್ದ. ಒಮ್ಮೆಯಂತೂ ಸೊಂಟಕ್ಕೆ ಒದ್ದೇ ಬಿಟ್ಟ. ಇಂಥ ಕಾಲಕ್ಕೆ ನಾನು ಅಳುತ್ತ ಒಳ ಖೋಲಿಗೆ ಹೋಗುತ್ತಿದ್ದೆ. ತೀರಾ ಹಿಂದಿನದು. ಕಗ್ಗತ್ತಲೆಯ ಒಡಲಲ್ಲಿ ಮತ್ತೂ

